PDF Complete
Your complimentary use period has ended. Thank you for using PDF Complete.
Click Here to upgrade to Unlimited Pages and Expanded Features

ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ವಿ.ಕೆ., ಬೆಂಗಳೂರು–560065

* ಸಮಗ್ರ ಕೃಷಿ ಹವಾಮಾನ ವರದಿ ಪತ್ರಿಕೆ *

ದಿನಾಂಕ: **04-06-2013**

ಚಿಕ್ಕಬಳ್ಳಾಪುರ ಜಿಲ್ಲೆಗೆ ಸೀಮಿತವಾಗಿದೆ

ಈ ವಾರದ ಮುನ್ಸೂಚನೆ (ದಿನಾಂಕ **05.06.13 – 09.06.13** ವರೆಗೆ)

	05.06.13	06.06.13	07.06.13	08.06.13	09.06.13
ಮಳೆ (ಮಿ ಮಿ)	20	21	23	24	22
ಗರಿಷ್ಠ ಉಷ್ಣಾಂಶ(ಡಿ.ಸೆ.)	28	28	29	28	29
ಕನಿಷ್ಠ ಉಷ್ಣಾಂಶ (ಡಿ.ಸೆ.)	20	20	21	21	20
ಮೋಡ (ಪ್ರಮಾಣ)	6	6	5	6	5
ಅರ್ದ್ರತೆ ೭.೨೦ ಬೆ (ಶೇ)	85	86	84	85	85
ಅರ್ದ್ರತೆ ೨.೨೦ ಮ (ಶೇ)	77	78	78	79	78
ಗಾಳಿಯ ವೇಗ (ಕಿ.ಮಿ/ಗಂಟೆಗೆ)	6	7	7	6	7
ಗಾಳಿಯ ದಿಕ್ಕು (ಡಿಗ್ರಿ)	260	270	260	260	250

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ನಾಲ್ಕು ದಿನಗಳಲ್ಲಿ ಆಕಾಶದಲ್ಲಿ ಅಗಿಂದಾಗ್ಗೆ ಮೋಡಕವಿದ ವಾತವರಣವಿದ್ದು ಮತ್ತು ಉಷ್ಣಾಂಶದ ಏರಿಳಿತದಿಂದ ಅಲ್ಲಲ್ಲಿ ಚದುರಿದಂತೆ ಮಳೆಯಾಗುವ ಸಂಭವವಿರುತ್ತದೆ.**ದಿನದ ಗರಿಷ್ಠ ಉಷ್ಣಾಂಶ 28.0-29.0°C ಮತ್ತು ಕನಿಷ್ಠ 20.0-21.0°C ಇರುವ ಸಾಧ್ಯತೆ ಇದೆ. ಬೆಳಿಗಿನ ಅರ್ದ್ರತೆ ಪ್ರಮಾಣ ಶೇ 84-86% ಇದ್ದು ಮಧ್ಯಹಾನ 77-79 % ಇರುವುದು ಮತ್ತು ಗಾಳಿಯು ನೈರುತಯ ದಿಕ್ಕಿನಿಂದ ಗಂಟೆಗೆ ಸರಾಸರಿ 6-7 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.**

PDF Complete
Your complimentary use period has ended. Thank you for using PDF Complete.
Click Here to upgrade to Unlimited Pages and Expanded Features

ಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಸಾಮಾನ್ಯ ಸೂಚನೆಗಳು:

- **ಈ ವರ್ಷದ ಮುಂಗಾರು ಈಗಾಗಲೇ ರಾಜ್ಯಕ್ಕೆ ಕಾಲಿಟ್ಟಿದ್ದು, ಈ ಸಮಯದಲ್ಲಿ ರೈತರು ಆಳವಾದ ಉಳುಮೆ ಮಾಡತಕ್ಕದ್ದು ಹಾಗೂ ಉತ್ತಮ ತಳಿಗಳ ಬೀಜ ಮತ್ತು ಗೊಬ್ಬರವನ್ನು ಸಿದ್ಧವಾಗಿಟ್ಟುಕೊಳ್ಳುವುದು.**
- **ಆಯಾ ವಲಯ ಪ್ರದೇಶಕ್ಕೆ ಶಿಫಾರಸ್ಸು ಮಾಡಿದ ತಳಿಗಳನ್ನೇ ಬಿತ್ತನೆಗೆ ಬಳಸುವುದು ಸೂಕ್ತ**
- ಬಿತ್ತನೆಗೆ ಮೊದಲು ಸಾವಯವ ಗೊಬ್ಬರವನ್ನು ಭೂಮಿಗೆ ಸೇರಿಸುವುದು ಹಾಗು ಭೂಮಿಯನ್ನು ಮಟ್ಟಮಾಡಿ ಬಿತ್ತನೆಗೆ ಹದಮಾಡಿಕೊಳ್ಳುವುದು.
- ಖುಷ್ಕಿ ಜಮೀನಿನಲ್ಲಿ ಬದು ಮತ್ತು ಬಸಿಗಾಲುವೆಗಳನ್ನು ಸ್ವಚ್ಛ ಮಾಡುವುದು ಹಾಗು ಕೃಷಿ ಹೊಂಡಗಳನ್ನು ದುರಸ್ತಿಗೊಳಿಸಿ ನೀರು ನಿಧಾನವಾಗಿ ಹರಿಯುವಂತೆ ಮಾಡುವುದು ಮಣ್ಣಿನ ಸವಕಳಿ ತಪ್ಪಿಸಿ ಹಾಗು ಮಣ್ಣಿನ ಸಂರಕ್ಷಣೆ ಮಾಡುವುದು

ತೊಗರಿ:

- **ತೊಗರಿ: ತೊಗರಿ ತಳಿಗಳಾದ TTB-7, BRG-1, BRG-2 ವಿಶ್ವವಿದ್ಯಾನಿಲಯದ ಆವರಣದಲ್ಲಿ/ ಕೃಷಿ ಇಲಾಖೆಯಲ್ಲಿ ದೊರೆಯುತ್ತಿದ್ದು, ರೈತರು ಇವನ್ನು ಪಡೆದು ಬಿತ್ತನೆ ಮಾಡಿ ಅಧಿಕ ಇಳುವರಿ ಪಡೆಯಲು ಸೂಚಿಸಲಾಗಿದೆ.**
- **ಬೀಜೋಪಚಾರ: ದ್ವಿದಳ ಬೆಳೆಗಳನ್ನು ನಾಟಿ ಮಾಡುವ ಮೊದಲು ರೈಜ಼ೊಬಿಯಂ ಜೈವಿಕ ಗೊಬ್ಬರದಿಂದ (೫೦೦ ಗ್ರಾಂ ಪ್ರತಿ ಹೆಕ್ಟೇರಿಗೆ) ಉಪಚರಿಸುವುದರಿಂದ ಸಾರಜನಕದ ಬಳಕೆಯನ್ನು ಕಡಿಮೆ ಮಾಡಬಹುದು.**

ಮಾವು: ಹಣ್ಣನ್ನು ಕಟಾವು ಮಾಡುವ ಸಮಯದಲ್ಲಿ ನೆಲಕ್ಕೆ ತಾಗದ ರೀತಿ ಎಚ್ಚರ ವಹಿಸಿ. ಇದರಿಂದ ಕಟಾವಿನ ನಂತರ ಶಿಲೀಂಧ್ರದಿಂದ ಬರುವ ಹಲವಾರು ರೋಗಗಳನ್ನು ತಡೆಯಬಹುದು.

ನೋಡಲ್ ಅಧಿಕಾರಿ :
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು.